## ಅಂಗೈಯಲ್ಲಿ ಅರಮನೆ

### ಬಾರ್ ಕೋಲು!

ನಮ್ಮ ಬ್ಯಾಂಕಿನ ಗ್ರಾಹಕ ರೈತ ಆ ಊರಿನ ಏಕೈಕ ಎತ್ತಿನ ಗಾಡಿ ಹೊಂದಿರುವಾತ. ಅಂದು ಬ್ಯಾಂಕಿಗೆ ಎತ್ತಿನ ಗಾಡಿ ಸಮೇತ ಬಂದವರು ಆವರಣದಲ್ಲಿ ನಿಲ್ಲಿಸಿ, ಪಾಸ್‌ಬುಕ್ ಎಂಟ್ರಿ ಮಾಡಲು ಕೊಟ್ಟಿದ್ದರು. ಗ್ರಾಹಕ ಸ್ನೇಹಿ, ಸ್ವಮುದ್ರಣದ ಯಂತ್ರ ಸ್ಥಾಪಿಸಿದ್ದು ಪಾಸ್‌ಬುಕ್ ಗ್ರಾಹಕರೇ ಎಂಟ್ರಿ ಮಾಡಿಕೊಳ್ಳಬೇಕಿತ್ತು. ಪಾಸ್‌ಬುಕ್‌ಗೆ 'ಬಾರ್ ಕೋಡ್' ಲಗತ್ತಿಸಿಕೊಡಬೇಕಾಗಿತ್ತು, ಅವರಿಗೆ ಕುಳಿತುಕೊಳ್ಳಿ 'ಬಾರ್ ಕೋಡ್ ಬೇಕು' ಎಂದೆ.

ತಕ್ಷಣ ಆ ರೈತ ಬ್ಯಾಂಕಿನ ಆವರಣದಲ್ಲಿ ನಿಲ್ಲಿಸಿದ್ದ ತನ್ನ ಎತ್ತಿನ ಗಾಡಿ ಬಳಿ ಹೋಗಿ ಅದರಲ್ಲಿದ್ದ 'ಬಾರು ಕೋಲು' ತಂದು ನನ್ನ ಎದುರು ಇಟ್ಟು, 'ತಕ್ಕೊಳ್ಳಿ ಬಾರ್ ಕೋಲ್!' ಎಂದಾಗ ಅವರು ಬಾರ್ ಕೋಡ್ ಅನ್ನು ಬಾರ್ ಕೋಲಾಗಿಸಿದ್ದು ಕಂಡು ನಗು ಬಂತು!. ಆಮೇಲೆ ಅವರು 'ಬ್ಯಾಂಕಿನ ಆವರಣದಲ್ಲಿ ಬಿಡಾಡಿ ದನಗಳ ಕಾಟ, ಓಡಿಸಲು ನೀವು ಬಾರ್ ಕೋಲ್ ಕೇಳಿರಬೇಕು ಎಂದು ತಂದು ಕೊಟ್ಟೆ' ಅಂದರು.




**ಪೂರ್ಣಿಮಾ ಎಚ್.ಎನ್.**

### ನಾನ್ ವೆಜ್ ಇರಬೇಕವ್ವ!



ನಮ್ಮ ಅಜ್ಜಿ ಅನಕ್ಷರಸ್ಥಳು. ಆಧುನಿಕ ಕಾಲದ ಇಂಗ್ಲಿಷ್ ಭಾಷಾ ಜ್ಞಾನವಂತೂ ಎಳ್ಳುಕಾಳಿನಷ್ಟೂ ಇಲ್ಲ. ಮನೆಯ ಸಣ್ಣ ಮಕ್ಕಳು ಮಾತಾಡುವ ಇಂಗ್ಲಿಷ್ ಭಾಷೆಯನ್ನು ಅವಲೋಕಿಸಿ, ತಾನೂ ಮಾತಾಡುವ ಉಮೇದು ಅವಳಿಗೆ. ಒಮ್ಮೆ ನಮ್ಮ ಮಗಳು ಶಾಲೆಗೆ ಹೋಗಬೇಕಾದರೆ ಯಾವುದೋ ವಿಷಯಕ್ಕೆ ಕಿರಿಕಿರಿ ಮಾಡಿ ಅಳತೊಡಗಿದಳು. ಸಿಟ್ಟಿಗೆದ್ದ ನಾನು ಅವಳ ಕೆನ್ನೆಗೆ ಎರಡು ಏಟು ಕೊಟ್ಟೆ.

ಆಗ ನಮ್ಮಜ್ಜಿ 'ಸಾಲಿ ಓದಾಕಿ ತಟಗು ನಾನ್‌ವೆಜ್ ಇಲ್ಲ ಅಂದ್ರ ಹೆಂಗವ್ವ' ಅಂದಳು. ಅಳುತ್ತಿದ್ದ ಮಗಳು ಗಹಗಹಿಸಿ ನಗತೊಡಗಿದಳು. ನನಗೆ ವಿಚಿತ್ರ ಎನಿಸಿ ಯಾಕೆಂದು ಕೇಳಿದೆ. ಅಜ್ಜಿ 'ನಾಲೇಜ್' ಅನ್ನೋದಕ್ಕೆ 'ನಾನ್‌ವೆಜ್' ಅನ್ನುತ್ತಿದ್ದಾಳೆ ಎಂದು ಮತ್ತೆ ನಕ್ಕಳು. ಪುಣ್ಯ ಅನ್ನು ಆಕಿ 'ಗ್ಯಾರೇಜ್' ಅಂದಿಲ್ಲಲ್ಲ ಎಂದೆ. ನನ್ನ ಮಾತಿಗೂ ಅವಳು ನಗತೊಡಗಿದಳು.

**ಶಿ.ಕಾ. ಬಡಿಗೇರ**